

# ನರ್ಗಿಸ್ ಪ್ರೇಮ 'ಕಹಾನಿ'!

ಬಾಲಿವುಡ್‌ನಲ್ಲಿ ಕೇವಲ ಸೌಂದರ್ಯ ಮತ್ತು ಪ್ರತಿಭೆ ಇದ್ದರೆ ಸಾಲದು; ಜತೆಗೆ ಅದೃಷ್ಟವೂ ಇರಬೇಕು ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ಅಂಥಾದ್ದರಲ್ಲಿ ಸೌಂದರ್ಯವನ್ನೇ ಬಂಡವಾಳ ಮಾಡಿಕೊಂಡರೆ ಮಿಂಚಲು ಸಾಧ್ಯವೆ? ಸ್ವಲ್ಪ ಮಾತ್ರ ಪ್ರತಿಭೆ ಇದ್ದು, ಸೌಂದರ್ಯ ಒಂದು ತೂಕ ಹೆಚ್ಚೇ ಇರುವ ನರ್ಗಿಸ್ ಫಕ್ರಿಗೆ ಈಗ ಇದೇ ಸಮಸ್ಯೆ ಎದುರಾಗಿದೆ. ರಾಕ್ ಸ್ಟಾರ್ ಎಂಬ ಭರ್ಜರಿ ಸಿನಿಮಾದ ಮೂಲಕ ಹೀರೋಯಿನ್ ಆಗಿ ಭರ್ಜರಿ ಎಂಟ್ರಿ ಪಡೆದ ನರ್ಗಿಸ್, ಆ ಬಳಿಕ ಅವಕಾಶಗಳಿಲ್ಲದೆ ಖಾಲಿ ಕುಳಿತಿದ್ದಾದರೂ ಏಕೆ? ಎಕ್ಸ್‌ಪೋಸ್ ಮಟ್ಟಿಗೆ ನರ್ಗಿಸ್ ಯಾವ ಹಿಂಜರಿಕೆಯನ್ನೂ ತೋರಿಸಿಲ್ಲ. ಸಿನಿಮಾದ ಸ್ಟಿಲ್‌ಗಳು ಮಾತ್ರವಲ್ಲ, ಬೇರೆ ಪತ್ರಿಕೆಗಳ ಮುಖಪುಟ, ಒಳಪುಟಗಳಿಗೂ ಧಾರಾಳ ಮೈತೋರಿಸಿ ಫೋಟೋ ಸೆಶನ್ ಮಾಡಿಸಿಕೊಂಡ ಫಕ್ರಿ, ಮಾಡೆಲಿಂಗ್‌ನಲ್ಲೂ ಬಿಂದಾಸ್ ಫೋಟೋಗಳಿಗೆ ಮೈತೋರಿದವಳೇ. ರಾಕ್ ಸ್ಟಾರ್ ಚಿತ್ರದ ನಟನೆ ಪರವಾಗಿಲ್ಲ ಎನ್ನುವಂತೆಯೇ ಇತ್ತು. ಸಿನಿಮಾದಲ್ಲಿ ಇಂಪಾದ ಹಾಡುಗಳಿದ್ದವು. ಆ್ಯಕ್ಷನ್ ಇತ್ತು. ಮೊದಲ ವಾರದ ಕಲೆಕ್ಷನ್ ಕೂಡಾ ಚೆನ್ನಾಗಿತ್ತು. ಆದರೆ ಚಿತ್ರದಿಂದ ಹೀರೊ ರಣಬೀರ್ ಕಪೂರ್‌ಗೆ ಖ್ಯಾತಿ ಬಂತೇ ಹೊರತು, ಹೀರೋಯಿನ್ ನರ್ಗಿಸ್‌ಗೆ ಅಂತಹ ಮೈಲೇಜ್ ದಕ್ಕಲೇ ಇಲ್ಲ!

ರಾಕ್‌ಸ್ಟಾರ್ ಚಿತ್ರದಲ್ಲಿ ಅಭಿನಯಿಸುತ್ತಿರುವಾಗಲೇ ಬಂದ ಒಂದೆರಡು ನಟನೆಯ ಆಫರ್‌ಗಳನ್ನು ನರ್ಗಿಸ್ ನಯವಾಗಿಯೇ ತಿರಸ್ಕರಿಸಿದಳಂತೆ. ಚಿತ್ರ ಬಿಡುಗಡೆಯಾದ ಬಳಿಕ ನಿರ್ಮಾಪಕರು ಮನೆ ಮುಂದೆ ಕ್ಯೂ ನಿಲ್ಲುತ್ತಾರೆ ಎನ್ನುವುದು ಆಕೆಯ ನಿರೀಕ್ಷೆಯಾಗಿತ್ತು. ಆದರೆ ಚಿತ್ರ ಥಿಯೇಟರಿನಿಂದ ಎತ್ತಂಗಡಿಯಾಗಿ ತಿಂಗಳೆರಡು ಕಳೆದರೂ ಯಾವ ನಿರ್ಮಾಪಕರೂ ಬರಲಿಲ್ಲ. ಇದೀಗ ಮಾರ್ಚ್ ತಿಂಗಳಲ್ಲಿ ನಿರ್ಮಾಪಕ ನಿಖಿಲ್ ಅಡ್ವಾಣಿ ತಮ್ಮ ಹೊಸ ಚಿತ್ರದಲ್ಲಿ ನರ್ಗಿಸ್‌ಳನ್ನು ಹೀರೋಯಿನ್ ಆಗಿ ಆಯ್ಕೆ ಮಾಡಿರುವುದಾಗಿ ಪ್ರಕಟಿಸಿದ್ದಾರೆ. ಆದರೆ ಚಿತ್ರದ ನಾಯಕ ಅರ್ಜುನ್ ರಾಂಪಾಲ್ ಇನ್ನೂ ಇದಕ್ಕೆ ಸಮ್ಮತಿ ನೀಡಿದ ವರದಿ ಬಂದಿಲ್ಲ!

ಹಾಗೆಂದು ಕೈಯಲ್ಲಿ ಕೆಲಸವಿಲ್ಲದೆ ನರ್ಗಿಸ್ ಸುಮ್ಮನೇ ಕುಳಿತಿಲ್ಲ. ಸದ್ಯಕ್ಕೆ ಬಾಲಿವುಡ್‌ನಲ್ಲಿ ಹಬ್ಬಿರುವ ದಟ್ಟ ಗಾಳಿಸುದ್ದಿ ಏನೆಂದರೆ, ನರ್ಗಿಸ್ ಮತ್ತು ಶಾಹಿದ್ ಕಪೂರ್ ಪರಸ್ಪರ ಪ್ರೀತಿಸುತ್ತಿದ್ದಾರಂತೆ. ಇಬ್ಬರೂ ಪ್ರತಿದಿನವೂ ಗುಟ್ಟಾಗಿ ಭೇಟಿಯಾಗುತ್ತಿದ್ದಾರಂತೆ. ಎರಡು ವಾರಗಳ ಹಿಂದೆ ಗೋವಾದ ಮಾರ್ಜಿಮ್ ಬೀಚ್‌ನಲ್ಲಿ ಶಾಹಿದ್ ಕಪೂರ್ ತನ್ನ ಬರ್ತ್‌ಡೇಯನ್ನು ನಾಲ್ಕು ದಿನಗಳ ಕಾಲ ಭರ್ಜರಿಯಾಗಿ ಆಚರಿಸಿಕೊಂಡ. ಆ ವೇಳೆಗೆ ಅವನ ಜೊತೆಯಲ್ಲಿದ್ದವರಲ್ಲಿ ನರ್ಗಿಸ್ ಎದ್ದು ಕಾಣಿಸಿದ್ದಾಳೆ. ಒಂದು ದಿನವಂತೂ ರಾತ್ರಿ ಪಾರ್ಟಿಯಲ್ಲಿ ಅತಿಥಿಗಳು ಇನ್ನೂ ಬರುತ್ತಿದ್ದಂತೆಯೇ ಶಾಹಿದ್ ಮತ್ತು ನರ್ಗಿಸ್ ಒಟ್ಟಿಗೆ ಎಲ್ಲಿಗೋ ಕಣ್ಮರೆಯಾದರಂತೆ!

ಈಗಾಗಲೆ ಕರೀನಾ ಕಪೂರ್, ವಿದ್ಯಾ ಬಾಲನ್, ಅನೂಷ್ಕಾ ಶರ್ಮಾ, ಪ್ರಿಯಾಂಕಾ ಚೋಪ್ರಾ ಮುಂತಾದವರ ಜತೆ ನಿಕಟ ಗೆಳೆತನ ಬೆಳೆಸಿಕೊಂಡು ಬಳಿಕ ಕಳಚಿಕೊಂಡಿರುವ ಶಾಹಿದ್, ಹೊಸ ಹುಡುಗಿ ನರ್ಗಿಸ್ ಜತೆಗೆ ಒಡನಾಟ ಎಷ್ಟು ಕಾಲ ಮುಂದುವರಿಸಬಹುದು ಎಂದು ಬಾಲಿವುಡ್ ಪಂಡಿತರು ಲೆಕ್ಕ ಹಾಕುತ್ತಿದ್ದಾರೆ. ರಣಬೀರ್ ಮತ್ತು ಮಾಡೆಲ್ ಶ್ಯಾಮ್ ಮುನ್ನಿ ಜತೆಗೆ ಕೈ ಕೈ ಹಿಡಿದು ಓಡಾಡುತ್ತಿದ್ದ ನರ್ಗಿಸ್ ಕೂಡಾ ಈಗ ಹಳೆಯ ಗೆಳೆಯರನ್ನು ಕಣ್ಣೆತ್ತಿ ನೋಡುತ್ತಿಲ್ಲ. ಒಟ್ಟಾರೆ ಮಾಧ್ಯಮಗಳಿಗೆ ಸುದ್ದಿ ಸಂಭ್ರಮ!

■ ಬಿಂದು

